ರಾಜ್ಯದಲ್ಲಿರುವ ದೊಡ್ಡ ಕೆರೆಗಳ ಬಗ್ಗೆ

೧೮೬೧. ಶ್ರೀ ಎ. ಕೃಷ್ಣಪ್ಪ (ವರ್ತೂರು).— ಮಾನ್ಯ ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ದೊಡ್ಡ ಕೆರೆಗಳ ಸಂಖ್ಯೆ ಎಷ್ಟು ?

ಆ) ಅವುಗಳ ಪೈಕಿ ಹೂಳು ತುಂಬಿ ನಿರರ್ಥಕವಾಗಿರುವ ಕೆರೆಗಳ ಸಂಖ್ಯೆಗಳೆಷ್ಟು ?

ಇ) ಸದರಿ ಕೆರೆಗಳಲ್ಲಿ ತುಂಬಿರುವ ಹೂಳನ್ನು ತೆಗೆಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮವೇನು ?

ಈ) ಮೇಲ್ಕಂಡ ಕೆರೆಗಳ ಪೈಕಿ ಎಷ್ಟು ಕೆರೆಗಳ ಕಟ್ಟೆಗಳು ದುರ್ಬಲವಾಗಿವೆ ?

ಉ) ಸದರಿ ಕೆರೆಗಳ ಕಟ್ಟೆಗಳನ್ನು ಭದ್ರಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಕೆ. ಕೃಷ್ಣಮೂರ್ತಿ (ಸಣ್ಣ ಮತ್ತು ಏತ ನೀರಾವರಿ ರಾಜ್ಯ ಮಂತ್ರಿಗಳು).—

ಅ) ೪೦೭ (೨೦೦ ಹೆಕ್ಟೇರುಗಳಿಗಿಂತ ಹೆಚ್ಚು ಅಚ್ಚುಕಟ್ಟು ಹೊಂದಿರುವ ಕೆರೆಗಳು)

ಆ) ಯಾವುದೂ ನಿರರ್ಥಕವಾಗಿಲ್ಲ.

ಇ) ಭಾಗಶಃ ಹೂಳು ತುಂಬಿರುವ ಕೆಲವು ಕೆರೆಗಳನ್ನು ಆರ್ಥಿಕ ಲಭ್ಯತೆಯನ್ನವಲಂಬಿಸಿ, ಹಂತ ಹಂತವಾಗಿ ಹೂಳೆತ್ತಲು ಕ್ರಮ ತೆಗೆದುಕೊಳ್ಳಲಾಗುವುದು.

ಈ) ಯಾವುದೂ ಇಲ್ಲ.

ಉ) ಪ್ರಶ್ನೆ ಉದ್ಭವಿಸುವುದಿಲ್ಲ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ರಸ್ತೆಗಳ ದುರಸ್ತಿ ಬಗ್ಗೆ

೧೬೫೭. ಶ್ರೀ ಬಿ. ಲಕ್ಕಪ್ಪ. (ಚಿಕ್ಕನಾಯಕನಹಳ್ಳಿ).— ಮಾನ್ಯ ನಗರಾಭಿವೃದ್ಧಿ ಮತ್ತು ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಪ್ರಮುಖ ರಸ್ತೆಗಳಾದ ಚಿಕ್ಕನಾಯಕನಹಳ್ಳಿ, ಹಲದನಕೆರೆ ಹಂಳಿಯೂರು, ಬಾಣವಾರ ರಸ್ತೆಗಳು ಹಾಳಾಗಿದ್ದು ಅವುಗಳ ದುರಸ್ತಿ ಕಾಮಗಾರಿ ಕೈಗೊಳ್ಳಲು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವೆ ?

ಆ) ಹಾಗಿದ್ದಲ್ಲಿ ಇದಕ್ಕೆ ಒದಗಿಸಲಾದ ಹಣವೆಷ್ಟು, ಹಾಗೂ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿ ಲೋಕೋಪಯೋಗಿ ಸಚಿವರು).—

ಅ) ನಿಜ.

ಆ) ಈ ರಸ್ತೆಗಳ ನಿರ್ವಹಣೆ ಮತ್ತು ದುರಸ್ತಿಗೆ ಒದಗಿಸಿರುವ ಅನುದಾನ ಕೆಳಗೆ ಕಂಡಂತಿದೆ.

೧೯೮೭–೮೮ನೇ ಸಾಲಿನಲ್ಲಿ —೫.೭೦ ಲಕ್ಷ ರೂಗಳು.

೧೯೮೮–೮೯ನೇ ಸಾಲಿನಲ್ಲಿ —೬.೫೦ ಲಕ್ಷ ರೂಗಳು

ವರ್ಷ ವರ್ಷ ಲಭ್ಯವಾಗುತ್ತಿರುವ ಅನುದಾನಕ್ಕನುಗುಣವಾಗಿ ರಸ್ತೆಗಳ ದುರಸ್ತಿ ಕೆಲಸಗಳನ್ನು ಕೈಗೊಂಡು ರಸ್ತೆಗಳನ್ನು ಸಂಚಾರಕ್ಕೆ ಯೋಗ್ಯವಾಗಿರುವಂತೆ ಇಡಲು ಪ್ರಯತ್ನಿಸಲಾಗುತ್ತಿದೆ.